ಅ) ಹುಕ್ಕೇರಿ ಪಟ್ಟಣಕ್ಕೆ ಯೋಜಿಸಲಾಗಿರುವ ಕೊಟಬಾಗಿ ನೀರು ಪೂರೈಕೆ ಯೋಜನೆ ಕಾರ್ಯ ಪೂರ್ಣಗೊಂಡಿದೆಯೇ ಹಾಗೂ ಶುದ್ಧ ನೀರು ಒದಗಿಸಲಾಗುತ್ತಿದೆಯೇ?

ಆ) ಅಲ್ಲಿ ನೀರು ಫಿಲ್ಟರೇಶನ್ ಟ್ಯಾಂಕ್ ನಿರ್ಮಿಸಲಾಗಿದೆಯೇ?

ಇ) ಇಲ್ಲವಾದಲ್ಲಿ ಅದನ್ನು ಯಾವಾಗ ನಿರ್ಮಿಸಲಾಗುತ್ತದೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಜಲ ಶುದ್ಧೀಕರಣಗಾರಕ್ಕೆ ಸಂಬಂಧಪಟ್ಟ ಕಾಮಗಾರಿಗಳನ್ನು ಹೊರತುಪಡಿಸಿ ಹುಕ್ಕೇರಿ ಪಟ್ಟಣಕ್ಕೆ ದಿ: 16-12-92ರಿಂದ ಕೊಟಾಬಾಗಿ ನೀರು ಪೂರೈಕೆ ಯೋಜನೆಯನ್ನು ಕಾರ್ಯಗತಗೊಳಿಸಲಾಗದೆ. ಹಾಗೂ ದಿ: 29-12-92 ರಿಂದ ಕ್ಲೋರಿನ್‌ಯುಕ್ತ ನೀರನ್ನು ಸರಬರಾಜು ಮಾಡಲಾಗುತ್ತಿದೆ

ಆ) ನೀರನ್ನು ಶುದ್ಧಪಡಿಸಲು ಸೆಟ್ಲಿಂಗ್ ಟ್ಯಾಂಕ್ ಹಾಗೂ ಸಂಬಂಧಪಟ್ಟ ಸಿವಿಲ್ ಕಾಮಗಾರಿಗಳು ಮುಗಿದಿದ್ದು ಅವುಗಳಿಗೆ ಯಂತ್ರೋಪಕರಣಗಳ ಪೂರೈಕೆ ಹಾಗೂ ಜೋಡಣೆ ಕಾರ್ಯ ಪ್ರಗತಿಯಲ್ಲಿವೆ.

ಇ) ಸೆಟ್ಲಿಂಗ್ ಟ್ಯಾಂಕ್ ಮತ್ತು ಸಂಬಂಧಪಟ್ಟ ಕಾಮಗಾರಿಗಳನ್ನು ಮೇ 1994ರ ಅಂತ್ಯದ ಒಳಗೆ ಮುಗಿಸಿ ಶುದ್ಧ ನೀರು ಸರಬರಾಜು ಮಾಡಲಾಗುವುದು.

ಹುಕ್ಕೇರಿ ಪುರಸಭೆಗೆ ಸರ್ಕಾರದ ವಿಶೇಷ ಅಭಿವೃದ್ಧಿ ಅನುದಾನ ಬಿಡುಗಡೆ

480 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಪುರಸಭೆಗೆ ಸರ್ಕಾರ ವಿಶೇಷ ಅಭಿವೃದ್ಧಿ ಅನುದಾನ ಬಿಡುಗಡೆ ಮಾಡಿದೆಯೇ?

ಆ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು? ಮತ್ತು ಯಾವಾಗ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತದೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ರೂ. 250.00 ಲಕ್ಷಗಳನ್ನು ಬಿಡುಗಡೆ ಮಾಡಿ, ಮುಗಿದುಹೋಗಿರುವುದರಿಂದ ಕೊಡಲಾಗಿಲ್ಲ. ಹೆಚ್ಚುವರಿ ಹಣ ಬಿಡುಗಡೆ ಆದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹುಕ್ಕೇರಿ ತಾಲ್ಲೂಕಿನಲ್ಲಿ (ಸಿಡಿಪಿ) ಬಾಲವಿಕಾಸ ಯೋಜನೆಯಡಿಯಲ್ಲಿ ಅಂಗನವಾಡಿ ಶಿಕ್ಷಕಿಯರ ನೇಮಕಾತಿ

479 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ (ಸಿಡಿಪಿ) ಬಾಲ ವಿಕಾಸ ಯೋಜನೆಯಡಿಯಲ್ಲಿ ಅಂಗನವಾಡಿ ಶಿಕ್ಷಕಿಯರನ್ನು ಶಾಸಕರ ಸಮಿತಿ ಗಮನಕ್ಕೆ ಬರದೆ ನೇಮಕ ಮಾಡಿಕೊಂಡ ಆಭ್ಯರ್ಥಿಗಳಿಷ್ಟು?

ಆ) ಅಂತಹ ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಯ ಮೇಲೆ ಕ್ರಮ ಕೈಕೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿಲ್ಲ, ಸರ್ಕಾರವು ರಚಿಸಿದ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಯಲ್ಲಿ 1991 ಮತ್ತು 1993ರಲ್ಲಿ ಆಯ್ಕೆ ಮಾಡುವಾಗ,

ಮಾನ್ಯ ಶಾಸಕರೂ ಹಾಜರಿದ್ದ ಸಮಯದಲ್ಲೇ ಹುಕ್ಕೇರಿ ಯೋಜನೆಯ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಶೇಷ ಘಟಕ ಯೋಜನೆ : ಗಿರಿಜನ ಉಪಯೋಜನೆ ಬಗ್ಗೆ

423- ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91, 1991-92, 1992-93, 1993-94ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ : ಗಿರಿಜನ ಉಪಯೋಜನೆ ಅನ್ವಯ (ಸ್ಪೆಷಲ್ ಕಾಂಪೋನೆಂಟ್ ಸ್ಕೀಂ) ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಆಯಾ ಸಾಲಿನ ಆಯವ್ಯಯ ಪಟ್ಟಿಯಲ್ಲಿ ನಿಗದಿ ಮಾಡಿದ ಹಣವೆಷ್ಟು?

ಆ) ಆದರಲ್ಲಿ ಖರ್ಚಾದ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಮತ್ತು ರಾಜ್ಯ ಯೋಜನೆ ಮತ್ತು ವಿಶೇಷ ಕೇಂದ್ರೀಯ ಸಹಾಯದಡಿ ಒದಗಿಸಿರುವ ಹಣ ಮತ್ತು ಖರ್ಚಾದ ಹಣ ಈ ಕೆಳಗಿನಂತಿದೆ :

ರೂ. ಲಕ್ಷಗಳಲ್ಲಿ

1990-91		1991-92		1992-93		1993-94	
ಒದಗಿಸಿದ ಹಣ	ಖರ್ಚು	ಒದಗಿಸಿದ ಹಣ	ಖರ್ಚು	ಒದಗಿಸಿದ ಹಣ	ಖರ್ಚು	ಒದಗಿಸಿದ ಹಣ	ಖರ್ಚು
			ವಿಶೇಷ ಘಟಕ ಯೋಜನೆ				
12834	12072	15316	12478	18736	16989	29352	18072
			ಗಿರಿಜನ ಉಪಯೋಜನೆ				
1258	1206	3012	1736	2374	1676	4169	2239

ಶಿಕಾರಿಪುರ ನಗರದ 2 ನೇ ಹಂತದ ಕುಡಿಯುವ ನೀರಿನ ಅಭಿವೃದ್ಧಿ

424-ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ಶಿಕಾರಿಪುರ ನಗರದ 2ನೇ ಹಂತದ ಕುಡಿಯುವ ನೀರಿನ ಅಭಿವೃದ್ಧಿ ಯೋಜನೆ ಮಂಜೂರಾತಿ ಮಾಡಲಾಗುವುದೇ?

ಆ) ಈ ಬಗ್ಗೆ ಅಂದಾಜು ಪಟ್ಟಿ ಸರ್ಕಾರದ ಕೈಸೇರಿದೆಯೇ? ಹಾಗೂ ಅದರ ಅಂದಾಜಿನ ಮೊತ್ತ ಎಷ್ಟು ?

ಇ) ಹೆಚ್ಚು ಜನಸಂಖ್ಯೆ ಇರುವ ಈ ನಗರಕ್ಕೆ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ

ಆ) ಹೌದು.

ರೂ. 49.00 ಲಕ್ಷಗಳ ಅಂದಾಜಿನ ಯೋಜನೆಯು ಸ್ವೀಕೃತಿಗೊಂಡಿದ್ದು, ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದ್ದು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯೊಂದಿಗೆ ಸಮಾಲೋಚಿಸಲಾಗುತ್ತಿದೆ.